ಜ್ಞಾನವನ್ನು ಬೆಳೆಸಿಕೊಳ್ಳುತ್ತಾರೆ ಎಂದುಕೊಳ್ಳೋಣ. ಇದು ಪೋಷಕರಿಗೆ ಅತ್ಯಂತ ಆನಂದ ಮತ್ತು ಹೆಮ್ಮೆ ತರುವ ವಿಚಾರ. ಹಾಗಾದರೆ ಶಿಕ್ಷಣದ ವ್ಯಾಖ್ಯೆಯನ್ನು ಆದಷ್ಟು ಬೇಗ ಆದಷ್ಟು ಹೆಚ್ಚಿನ ಮಾಹಿತಿ ಸಂಗ್ರಹಿಸುವುದು ಎಂದುಕೊಳ್ಳಬಹುದಲ್ಲವೇ?

ಇವತ್ತು ಎಲ್ಲಾ ಕ್ಷೇತ್ರಗಳಲ್ಲಿಯೂ ಮಾಹಿತಿಯ ಮಹಾಪೂರವೇ ಹರಿದುಬರುತ್ತಿದೆ. ಹಾಗಾಗಿ ಹೆಚ್ಚಿನ ಮಾಹಿತಿ ಸಂಗ್ರಹಿಸಿದಷ್ಟೂ ಹೆಚ್ಚು ವಿದ್ಯಾವಂತ ಅಥವಾ ಬುದ್ಧಿವಂತರೆನ್ನಿಸಿಕೊಳ್ಳಬಹುದು ಎನ್ನುವ ಭ್ರಮೆ ಸೃಷ್ಟಿಯಾಗಿದೆ. ವಿಪರ್ಯಾಸ ನೋಡಿ. ಪುಸ್ತಕಗಳು, ಕಂಪ್ಯೂಟರ್, ಅಂತರ್ಜಾಲ ಇವೆಲ್ಲಾ ಮಾಹಿತಿಗಳನ್ನು ಬೇಕಾದ ತಕ್ಷಣ ಕೊಡಲು ಸಿದ್ಧವಾಗಿ ಕುಳಿತಿವೆ. ಹಾಗಿದ್ದರೂ ನಾವು ಮಾಹಿತಿ ಸಂಗ್ರಹಣೆಯ ನಿರರ್ಥಕ ಕೆಲಸಕ್ಕಾಗಿ ನಮ್ಮ ಮಕ್ಕಳ ಅಮೂಲ್ಯ ಬಾಲ್ಯವನ್ನು ಶಿಕ್ಷಣದ ಹೆಸರಿನಲ್ಲಿ ಬಲಿಕೊಡುತ್ತಿದ್ದೇವೆ.

ಇವತ್ತು ಜ್ಞಾಪಕಶಕ್ತಿ ಮಾತ್ರ ಮಕ್ಕಳ ಬುದ್ಧಿವಂತಿಕೆಯ ಮಾನದಂಡವಾಗಿದೆ. ಹಾಗಾಗಿ ಅತಿ ಚಿಕ್ಕವಯಸ್ಸಿನಲ್ಲಿ ಹೆಚ್ಚು ಮಾಹಿತಿಯನ್ನು ನೆನಪಿಟ್ಟುಕೊಂಡವನು ಬುದ್ಧಿವಂತಿಕೆಯ ಏಣಿಯಲ್ಲಿ ಮೇಲಿರುತ್ತಾನೆ. ನಮ್ಮ ಸರ್ಕಾರಗಳು ಮತ್ತು ಶಿಕ್ಷಣ ತಜ್ಞರು ಇದರ ಬಗೆಗೆ ಕೇವಲ ತುಟಿಸೇವೆ ಮಾಡುತ್ತಿದ್ದಾರೆಯೇ ಹೊರತು ಇದನ್ನು ಬದಲಾಯಿಸುವ ದೂರದೃಷ್ಟಿಯಾಗಲಿ, ಬದ್ಧತೆಯಾಗಲಿ ಅವರಲ್ಲಿ ಕಂಡುಬರುತ್ತಿಲ್ಲ. ಭ್ರಷ್ಟಾಚಾರದ ನರಕವಾಗಿರುವ ಸರ್ಕಾರೀ ವ್ಯವಸ್ಥೆಯಿಂದ ಏನನ್ನಾದರೂ ನಿರೀಕ್ಷಿಸುವುದು ಅಸಾಧ್ಯ ಎನ್ನುವ ಮಟ್ಟವನ್ನು ನಾವು ತಲುಪಿದ್ದೇವೆ.

ಹೀಗೆ ಮಕ್ಕಳ ಮೃದು ಮನಸ್ಸುಗಳ ಮೇಲೆ ಅಗಾಧವಾದ ಒತ್ತಡವನ್ನು ಸೃಷ್ಟಿಸುತ್ತಿರುವ ಶಿಕ್ಷಣ (ಅ)ವ್ಯವಸ್ಥೆಯಲ್ಲಿ ಸಾಮಾನ್ಯ ಪೋಷಕರ ಪಾತ್ರವೇನೂ ಇಲ್ಲ. ಆದರೆ ಓದಿನಲ್ಲಿ ಮಕ್ಕಳು ಎಲ್ಲಿ ಕೆಳಗೆ ಉಳಿದುಬಿಡುತ್ತಾರೋ ಎನ್ನುವ ಪೋಷಕರ ಭಯ, ಆತಂಕಗಳಿಗೂ ಕೂಡ ಮುಗ್ಧ ಮಕ್ಕಳೇ ಗುರಿಯಾಗಿರುತ್ತಾರೆ. ವಾಸ್ತವವಾಗಿ ಈ ನಿಟ್ಟಿನಲ್ಲಿ ಏನು ಮಾಡಬೇಕು ಎಂದು ಹೆಚ್ಚಿನ ಪೋಷಕರಿಗೂ ತಿಳಿದಿರುವುದಿಲ್ಲ. ಉದ್ದೇಶರಹಿತವಾಗಿರುವ ಶಿಕ್ಷಣವ್ಯವಸ್ಥೆಗೆ ಹೊಂದಿಕೊಳ್ಳಲೇಬೇಕಾದ ಅನಿವಾರ್ಯತೆ ಪೋಷಕರಿಗಿದೆ. ಹಾಗಿದ್ದರೂ ತಮ್ಮ ಮಿತಿಗಳಲ್ಲಿ ಅವರು ಮಾಡಬಹುದಾದ ಕೆಲವು

